ಆಶೀರ್ವಾದ ನಮ್ಮ ಮ್ಯಾಲೆ ಇರಲಿ' ಎಂದು ಜನರ ಕಡೆ ಕೈ ಮುಗುದು ಮನೆ ಒಳಗ ಬಂದ. ಹಿಂದನೆ ರುದ್ರ ಓಡಿ ಬಂದು, 'ಸಾಹುಕಾರ ಚಂದವ್ವ, ಮಗಳು ಮಲ್ಲವ್ವ ಬಂದಾರ' ಅಂದ. 'ಹಾ... ಸರಿ ಆ ಚಂದವ್ವಗ ಐದು ನೂರು ಕೊಡು. ನಾಳೆ ಮುಂಜಾನೆ ಬರಾಕ ಹೇಳು' ಎಂದು ಕೊಂಕಳಿಗೆ ಕುತ್ತಿಗೆಗೆ ಸೇಂಟು ಹಾಕ್ಕೆಂಡ.

ಡ್ರೈವರ್ ಕಾರು ತಂದ. 'ಸೀದಾ ಗೌಡರ ಮನಿಗೆ ನಡಿ.' ಎಂದು ಕುಂತ ಜನರ ಕಡೆ ಅತೀ ವಿನಯದಿಂದ ಕೈ ಮುಕ್ಕಂಡು ಕಾರಲ್ಲಿ ಕುಳಿತುಕೊಂಡ. ಜನರು ಕಣ್ಮರೆಯಾದ ಮೇಲೆ ಕಾರಿನ ಗ್ಲಾಸ್ ಏರಿಸಿ ಕಪ್ಪು ಕನ್ನಡಕ ತೆಗೆದು ಕಪ್ಪಾದ ಮುಖವನ್ನು ಅದೇ ಗ್ಲಾಸಲ್ಲಿ ನೋಡಿಕಂಡ. ಒಂದೆರಡು ಗೋಡಂಬಿ ತಗಂಡು ಬಾಯಿಗಿ ಹಾಕ್ಕೆಂಡು ಸೀಟು ಹಿಂದಕ್ಕ ಮಾಡಿಕೊಂಡು ಒರಗಿದ.

'ಆ ಚೆಂದವ್ವನ ಮಗಳು ಮಲ್ಲವ್ವ ಬಾಳ ಕುಂಟೈತನು. ನೋಡಾಕ ಬಾಳ ಚಂದಾಳಂತ. ಯಾರನ ಕೈ ಹಾಕ್ಯಾರೇನು' ಡ್ರೈವರ್ ಮುಖ ನೋಡಲಾರದೆ ಕೇಳಿದ.

'ಒಂದು ಕಾಲು ಸಣ್ಣ ಐತೆಪ ಎಳದು ಹಾಕ್ತಾಳ. ನೋಡಾಕ ಚಂದಾಳ. ಮೈಯ್ಯಾಗ ರಕ್ತನೆ ಇಲ್ಲಪ. ಓದದ್ರಾಗ ಬಾಳ ಹುಷಾರು ಐತೆಂತಪ.'

'ಅದಕ್ಕೇನು ಬುಡು ರಕ್ತ ತುಂಬಿಸಿದರ ಆಯಿತು. ಗೌಡರು ಈಗ ಚಂದವ್ವನ ಮನಿಗೆ ಹೋಗಾದಿಲ್ಲಂತ.'

'ಇನ್ನೇನು ಹೋಗ್ತಾರಪ. ಆಕಿಗು ವಯಸ್ಸಾಯಿತಲಾ. ಮೊದಲಂಗ ಯಾರೀಗ ಆ ದಂದೆಕ್ಕ ಬರಾದಿಲ್ಲಪ. ಎಲ್ಲ ಕಲಿಬೇಕಂತಾರ. ಗೌಡರು ಕೂಡು ಈಗ ಪಟ್ಣಕ್ಕ ಹೋಗ್ತಾರಲ್ಲಪ. ಅಲ್ಲೇ ಮಸ್ತ ಮಾಲು ಸಿಗ್ತಾವ. ಈಗ ಕಲ್ತೋರೆ ಆ ದಂದೆ ಮಾಡತಾರಲ್ಲಪ'

'ನೀನು ಬಾಳ ಹುಷಾರಿದ್ದೆಲೆ. ಗೌಡರು ಮನೆಬಂತು ನಿಲ್ಲಿಸು. ಕಾರಿನ್ಯಾಗ ಮಾತು ಕಾರಿನ್ಯಾಗ ಇರಲಿ' ಎಂದು ಕಾರಿಂದ ಇಳಿದು ಕನ್ನಡಕದಲ್ಲಿ ಮುಖ ನೋಡಿಕಂಡು ಸ್ವಲ್ಪ ಕೊಂಕಳಕ್ಕ ಸೇಂಟು ಹೊಡಕಂಡ.

ಗೌಡರು ಬಾಗಿಲಲ್ಲೇ ಕಾಯುತ್ತಿದ್ದರು. 'ಬಾರಪ ದುರುಗಪ್ಪ ಸಾಹುಕಾರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ. ಭಾರಿ ಮಸ್ತ ಕಾಣ್ತಲಲೆ. ಒಳ್ಳೇ ಕರ್‍ರಗ ಮಿಂಚುತ್ತಲಲೇ...'

'ಎಲ್ಲಾ ನಿಮ್ಮ ದಯಪ್ಪೋ' ಎಂದು ಕಾಲು ಮುಟ್ಟಿ ನಮಸ್ಕಾರ ಮಾಡಿದ.

'ದೊಡ್ಡ ಹಾಲಲ್ಲಿ ಕುಳಿತರು. ನಿನಗ ಪೂರಿ ಇಷ್ಟಂತ ಮಾಡೀವಲೆ' ಎಂದು ನಾಷ್ಟ ಮಾಡಿದರು.

'ನೋಡು ಇಷ್ಟು ಫೈಲ್ ಐದಾವ. ಎಲ್ಲದಕ್ಕ ಸಹಿ ಹಾಕು. ನಾ ನೋಡಿ ಇಟ್ಟೀನಿ. ಸದ್ಯ ಕಾಂಪ್ಲೆಕ್ಸಗಳನ್ನ ಹೊಡೇದು ಬ್ಯಾಡ. ಸುಮ್ಮನೆ ಅಂಜಿಸದು. ಅವರೆ ಸೂಟುಕೇಸು ಇಡಕಂಡು ಓಡಿ ಬರ್‍ತಾರ. ಬಂದೋಟು ಬಳಕಬೇಕು. ಜಿಲ್ಲಾಧಿಕಾರಿಗೂ ಹೇಳಬೇಕು. ಆತಗೂ ಒಂದಿಟು ಸಾಗಿಸಬೇಕು. ಅದಕ್ಕೆಲ್ಲಾ ವ್ಯವಸ್ಥಾ ನಾ ಮಾಡ್ತೀನಿ. ನಮಗ ಅವ ವಿಸ್ಕಿ ಬಾಟಲಿ ಕೊಟ್ಟಾಗಲೇ ಅವ ಏನಂತ ಗೊತ್ತಾಗ್ಯಾದ. ಅವನ ಮಗ ಕೇರಳದಾಗ ಮೆಡಿಕಲ್ ಕಾಲೇಜು ಕಟ್ಟಸಾಕತ್ತ್ಯಾನಂತ. ಅದಕ್ಕ ಜಗ್ಗೆ ರೊಕ್ಕ ಬೇಕಲೆ. ಇವನು ಇರತನಕ ಎಷ್ಟು ಸಾಧ್ಯನು ಅಷ್ಟು ಹಿಂಡಬೇಕು' ಎಂದು ಅಡಿಕೆ ಚೂರು ಬಾಯಿಗಿ ಹಾಕ್ಕೆಂಡು ಕುಂತರು.

'ನನಗೇನು ಹೆಚ್ಚು ತಿಳೇದಿಲ್ಲಪಾ. ನೀವು ಹೆಂಗ ಅಂತೀರಿ ಅಂಗ' ಎಂದು ಫೈಲುಗಳಲ್ಲಿರುವ ಕಾಗದಗಳಿಗೆ ಸಹಿ ಹಾಕಿದ.

ಫೈಲುಗಳನ್ನ ಕೈಯಿಗೆ ತಗಂಡ ಗೌಡರು ಒಮ್ಮೆ ಎಲ್ಲವನ್ನು ದಿಟ್ಟಿಸಿ ನೋಡಿದರು. ಎಲ್ಲಾ ಸಹಿ ಸರಿಯಾಗಿದ್ದಾವ ನೋಡಿದರು. ಸರಿಯಾಗಿದೆ ಅನಿಸಿದ ಮೇಲೆ ಫೈಲ್ ಮುಚ್ಚಿಟ್ಟರು.

'ನೀನು ಸಹಿ ಹಾಕಿದ್ದು ಎಷ್ಟು ದುಡ್ಡಿಗೆ ಗೊತ್ತನು. ಏನು ಕಾಗದ ಪತ್ರ ಗೊತ್ತನು.'

'ಇಲ್ಲಪ್ಪೊ ನನಗೇನು ತಿಳಿತದ. ನೀವು ಎಲ್ಲಿ ಸಹಿ ಹಾಕಂತಿರಿ ಅಲ್ಲಿ ಹಾಕ್ತೀನಿ. ನೀವ ಈ ಸ್ಥಾನಕ್ಕ ತಂದೀರಿ' ಎಂದು ಹಲ್ಲು ಕಿರಿದ.

'ನಾಳೆ ಏನಾರ ಆದರ ನೀನೆ ಜೈಲಿಗೆ ಹೋತಿದ್ದಿ. ಸಹಿ ಮಾಡೋದಕ್ಕ ಮುಂಚೆ ಏನಂತ ವಿಚಾರ ಮಾಡಬೇಕಲೆ'

'ಯಪ್ಪಾ ನಿಮ್ಮನ್ನ ಅನುಮಾನಸದೇನಪಾ. ಜೈಲಿಗೆ ಹೋಗದೇನಪಾ ಕುತ್ತಿಗಿ ಕತ್ತರಿಸಿ ಕೊಡಂದರ ಕೊಟ್ಟುಬುಡ್ತೀನಿ.'

'ಅದೇನು ಬ್ಯಾಡ. ಅಂತ ಪ್ರಸಂಗ ಬರೋದಿಲ್ಲ. ಈ ಫೈಲ್ ಕುಡಿಯೋ ನೀರಿನ ಪ್ರಾಜೆಕ್ಟ್. ಎಪ್ಪತ್ತು ಕೋಟಿ ರೂಪಾಯಿ ಬಜೆಟ್. ಹತ್ತು ಕಿ.ಮೀ. ಪೈಪ್ ಹಾಬೇಕು. ಹತ್ತು ದೊಡ್ಡ ದೊಡ್ಡ ನೀರಿನ ಟ್ಯಾಂಕ್ ಕಟ್ಟಸಬೇಕು. ಇಷ್ಟಕ್ಕ ಒಂದು ನಲವತ್ತರಿಂದ ನಲವತ್ತೈದು ಕೋಟಿ